ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು 560001.**

ಸಂಖ್ಯೆ:ಸಿ7(8)ಆರ್.ಟಿ.ಇ/22-23ನೇ ದಾ.ಪು.60/2021-22 ದಿನಾಂಕ:05.05.2022

::ಸುತ್ತೋಲೆ::

ವಿಷಯ:2022-23ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ಎರಡನೇ ಸುತ್ತಿನ ಸೀಟು ಹಂಚಿಕೆ ಮಾಡಿರುವ ಬಗ್ಗೆ.

ಉಲ್ಲೇಖ:ಆರ್.ಟಿ.ಇ ಕಾಯ್ದೆಯಡಿ ಆನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳ ಹಂಚಿಕೆ ಪ್ರಕ್ರಿಯೆ ದಿನಾಂಕ:04.05.2022

@@@@@

2022-23ನೇ ಸಾಲಿಗೆ ಆರ್.ಟಿ.ಇ ಕಾಯ್ದೆಯಡಿಯಲ್ಲಿ ದಿನಾಂಕ:04.05.2022ರಂದು ಆನ್‌ಲೈನ್ ತಂತ್ರಾಂಶದಲ್ಲಿ ಲಾಟರಿ ಮೂಲಕ ಎರಡನೇ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ. ಸೀಟು ಹಂಚಿಕೆಯಾದ ಪ್ರತಿ ಮಗುವಿನ ಪೋಷಕರ ಮೊಬೈಲ್ ಸಂಖ್ಯೆಗೆ ದಿನಾಂಕ:05.05.2022 ರಂದು ಹಾಗೂ 06.05.2022ರಂದು ಪ್ರತಿ ದಿನ 04 ಬಾರಿ ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿ ಎಸ್.ಎಂ.ಎಸ್ ಕಳುಹಿಸಲಾಗುವುದು.

ಆದ್ದರಿಂದ ಆಯ್ಕೆಯಾದ ಮಗುವಿನ ಪೋಷಕರು ಇಲಾಖಾ ವೆಬ್‌ಸೈಟ್‌ಗೆ ಭೇಟಿ ನೀಡಿ, ಸೀಟು ಆಯ್ಕೆಯಾದ ಅರ್ಜಿಯ ಸಂಖ್ಯೆಯನ್ನು ನಮೂದಿಸಿ, ಸೀಟು ಹಂಚಿಕೆಯಾದ ಪ್ರತಿಯ ಪ್ರಿಂಟ್ ಪಡೆದುಕೊಂಡು, ಈಗಾಗಲೇ ಆರ್.ಟಿ.ಇ ಅರ್ಜಿಯೊಂದಿಗೆ ನೀಡಿದ ಮೂಲ ಆಧಾರ್ ಕಾರ್ಡ್‌ನೊಂದಿಗೆ ಆಯ್ಕೆಯಾದ ಶಾಲೆಗೆ ಸಂಪರ್ಕಿಸಿ ಮಗುವನ್ನು ದಾಖಲೆ ಮಾಡಿಸುವುದು. ದಾಖಲಾತಿ ಮಾಡಲು ದಿನಾಂಕ:16.05.2022 ಕೊನೆಯ ದಿನವಾಗಿರುತ್ತದೆ.

ಸೀಟು ಹಂಚಿಕೆಯಾಗುವ ಮೊದಲು ಪೋಷಕರು ಹಾಗೂ ಮಗುವಿನ ಎಲ್ಲಾ ದಾಖಲೆಗಳನ್ನು ಇಲಾಖೆಯ ಹಂತದಲ್ಲಿ ಸಂಪೂರ್ಣವಾಗಿ ಪರಿಶೀಲಿಸಿರುವುದರಿಂದ ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯವರು ದಾಖಲೆಗಳನ್ನು ಮರು ಪರಿಶೀಲನೆ ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರವೇಶದ ಸಂದರ್ಭದಲ್ಲಿ ಪೋಷಕರು ನೀಡುವ ಆಧಾರ್ ಕಾರ್ಡ್‌ನ್ನು ಪೋಷಕರು ಹಾಗೂ ಮಗುವನ್ನು ಗುರುತಿಸಲು ಮಾತ್ರ ಪರಿಗಣಿಸಲು ಹಾಗೂ ಆರ್.ಟಿ.ಇ ಅಡಿ ದಾಖಲಾಗುವ ಮಕ್ಕಳಿಂದ ಯಾವುದೇ ಶಾಲಾ ಶುಲ್ಕ ಪಡೆಯುವಂತಿಲ್ಲ ಎಂದು ಈ ಮೂಲಕ ಸೂಚಿಸಿದೆ. ರಾಜ್ಯ ಪಠ್ಯಕ್ರಮದ ಶಾಲೆಗಳಿಗೆ ಆಯ್ಕೆಯಾಗುವ ಆರ್.ಟಿ.ಇ ಮಕ್ಕಳಿಗೆ ಸರ್ಕಾರದಿಂದ ಉಚಿತ ಪಠ್ಯಪುಸ್ತಕ ನೀಡಲಾಗುವುದು. ಈ ವಿಚಾರವನ್ನು ಉಪನಿರ್ದೇಶಕರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಗಮನಕ್ಕೆ ತರಲು ಹಾಗೂ ಆರ್.ಟಿ.ಇ ಅಡಿ ಹಂಚಿಕೆಯಾದ ಮಗುವಿನ ದಾಖಲಾತಿಗೆ ಸೂಕ್ತ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

ಶಾಲಾ ಆಡಳಿತ ಮಂಡಳಿಯು ಆಯಾ ದಿನ ದಾಖಲಾದ ವಿದ್ಯಾರ್ಥಿಗಳ ವಿವರಗಳನ್ನು ಕಡ್ಡಾಯವಾಗಿ ಇಲಾಖಾ ವೆಬ್‌ಸೈಟ್ schooleducation.kar.nic.in ನಲ್ಲಿ ಆನ್‌ಲೈನ್ ಮೂಲಕ ದಾಖಲಾತಿಯನ್ನು ಶಾಲಾ ಲಾಗಿನ್‌ನಲ್ಲಿ ಅದೇ ದಿನ ಅಪ್‌ಲೋಡ್ ಮಾಡುವುದು. ಶಾಲಾ ಹಂತದಲ್ಲಿ ದಾಖಲಾತಿ ಮಾಡಿಕೊಂಡು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡದಿದ್ದಲ್ಲಿ ಆಯಾ ಶಾಲಾ ಆಡಳಿತ ಮಂಡಳಿಯವರೇ ಜವಾಬ್ದಾರರಾಗಿರುತ್ತಾರೆ. ದಾಖಲಾತಿ ಸಂಬಂಧ ಏನಾದರೂ ಅಡಚಣೆ ಆದಲ್ಲಿ ಇಲಾಖಾ ಇ-ಮೇಲ್ ಐಡಿ rtektk@gmail.com ಆನ್‌ಲೈನ್‌ನಲ್ಲಿ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ

ರವರಿಗೆ,

1) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರ ಮುಖಾಂತರ ಸಂಬಂಧಿಸಿದ ಶಾಲಾ ಮುಖ್ಯಸ್ಥರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸೂಚಿಸಿದೆ.

ಪ್ರತಿಯನ್ನು:

1. ಅಪರ ಆಯುಕ್ತರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಗೌರವಗಳೊಂದಿಗೆ.
2. ಅಪರ ಆಯುಕ್ತರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ಗೌರವಗಳೊಂದಿಗೆ.
3. ಕಛೇರಿ ಪ್ರತಿ.